PWD_COMM-1-PWD SEC

File No.PWD/572/CRM/2020-PWD_COMM-1-PWD SEC

ಕರ್ನಾಟಕ ಸರ್ಕಾರ

ಸಂಖ್ಯೆ: ಲೋಇ 572 ಸಿಆರ್ ಎಂ 2020(ಇ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ:09/10/2020.

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಲೋಕೋಪಯೋಗಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದ), ಕೆ.ಆರ್.ಸರ್ಕಲ್, ಬೆಂಗಳೂರು.

1. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ಉತ್ತರ), ಧಾರವಾಡ
2. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ಈಶಾನ್ಯ), ಕಲಬುರಗಿ
3. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ಕೇಂದ್ರ ವಲಯ), ಶಿವಮೊಗ್ಗ
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು

ಮಾನ್ಯರೆ,

ವಿಷಯ: ಗುತ್ತಿಗೆದಾರರು ಟೆಂಡರ್ ತಿರಸ್ಕರಿಸಿರುವುದಕ್ಕೆ ಸಲ್ಲಿಸುವ ಅಪೀಲು ಪ್ರಕರಣಗಳನ್ನು ವಿಲೇವಾರಿ ಮಾಡುವ ಕುರಿತು

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿಗಳಿಗೆ ಆಹ್ವಾನಿಸಲಾಗುವ ಟೆಂಡರ್ ಗಳಲ್ಲಿ ಸ್ವೀಕೃತಗೊಳ್ಳುವ ಗುತ್ತಿಗೆದಾರರ ತಾಂತ್ರಿಕ/ಆರ್ಥಿಕ ಬಿಡ್ ಗಳನ್ನು ಸಕ್ಷಮ ಪ್ರಾಧಿಕಾರವು ಪರಿಶೀಲಿಸಿ ನಿಬಂಧನೆಗಳಿಗನುಸಾರವಾಗಿ ಟೆಂಡರ್ ಪಡೆಯಲು ಅರ್ಹತೆಹೊಂದದೆ ಇದ್ದಲ್ಲಿ ಬಿಡ್ ಗಳನ್ನು ತಿರಸ್ಕರಿಸಿದಾಗ, ತಿರಸ್ಕೃತಗೊಂಡ ಗುತ್ತಿಗೆದಾರರಿಗೆ KTPP ಕಾಯ್ದೆ/ನಿಯಮಗಳಂತೆ ಮೇಲ್ಮನವಿ ಸಲ್ಲಿಸಲು ಅವಕಾಶವಿರುತ್ತದೆ. ಇಲಾಖೆಯಲ್ಲಿ Appellate authority ಕಾರ್ಯದರ್ಶಿಯವರಾಗಿದ್ದು, ಕೆಲವು ಟೆಂಡರ್ ಗಳಿಗೆ ಮೇಲ್ಮನವಿಗಳು ಲಿಖಿತ ರೂಪದಲ್ಲಿ ಸರ್ಕಾರದಲ್ಲಿ ಸ್ವೀಕೃತವಾಗುತ್ತಿದೆ. ಪ್ರಸ್ತುತ ಟೆಂಡರ್ ನ ಎಲ್ಲಾ ಪ್ರಕ್ರಿಯೆಗಳನ್ನು e-procurement ಮೂಲಕವೇ ನಿರ್ವಹಿಸಲಾಗುತ್ತಿದ್ದು, ಗುತ್ತಿಗೆದಾರರು ಮೇಲ್ಮನವಿ ಸಲ್ಲಿಸಲು e-procurement ನಲ್ಲಿ ಅವಕಾಶವಿರುತ್ತದೆ. ಆದ್ದರಿಂದ KTPP ಕಾಯ್ದೆ/ನಿಯಮಗಳಲ್ಲಿ ನಿಗದಿಪಡಿಸಿರುವ ಸಮಯದೊಳಗೆ ಗುತ್ತಿಗೆದಾರರು e-procurement ನಲ್ಲಿ ಅಪೀಲುಗಳನ್ನು ಸಲ್ಲಿಸಿದ್ದಲ್ಲಿ ಮಾತ್ರ ಪರಿಗಣಿಸಲಾಗುತ್ತಿದ್ದು, ಲಿಖಿತ ರೂಪದಲ್ಲಿ ಸ್ವೀಕೃತಗೊಳ್ಳುವ ಅಪೀಲುಗಳನ್ನು ಪರಿಗಣಿಸುವುದಿಲ್ಲ. ಆದ್ದರಿಂದ ಸದರಿ ಅಂಶವನ್ನು ಕಾಮಗಾರಿಗಳ ಟೆಂಡರ್ ನೋಟಿಫಿಕೇಷನ್ ನಲ್ಲಿ ಅಳವಡಿಸುವಂತೆ ತಿಳಿಸಿ ಎಲ್ಲಾ ಟೆಂಡರ ಆಹ್ವಾನಿಸುವ ಪ್ರಾಧಿಕಾರಗಳಿಗೆ ನಿರ್ದೇಶನ ನೀಡುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎನ್.ಎನ್.ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಇಲಾಖೆ (ಸಂಪರ್ಕ)